ನವಚೈತನ್ಯ ಸಂಚಾರವಾಗುವುದಂತೂ ಖಂಡಿತ. ದೇಶಪ್ರೇಮ, ರಾಷ್ಟ್ರಭಕ್ತಿಗಳ ಕುರಿತಾಗಿ ಅವರಾಡುವ ನುಡಿಗಳು ನಮ್ಮೆಲ್ಲ ಜಾಡ್ಯಗಳನ್ನೂ ಝಾಡಿಸಿ, ಕಾರ್ಯೋನ್ಮುಖರನ್ನಾಗಿಸುತ್ತವೆ. ಅವರೆನ್ನುತ್ತಾರೆ, ವ್ಯಕ್ತಿಗಳಂತೆ ರಾಷ್ಟ್ರಗಳೂ ಸ್ವಾವಲಂಬಿಗಳಾಗಬೇಕು ಎಂದು. ಅದೀಗ ನಿಜವಾದ ರಾಷ್ಟ್ರಪ್ರೇಮ.

ಒಂದು ಪತ್ರದಲ್ಲಿ ಸ್ವಾಮೀಜಿ ಹೀಗೆ ಬರೆಯುತ್ತಾರೆ: "ನೀವು ನಿಮ್ಮ ರಾಷ್ಟ್ರವನ್ನು ಪ್ರೀತಿಸುವಿರಾ? ಹಾಗಾದರೆ ಬನ್ನಿ. ಉತ್ತಮವಾದುದನ್ನು, ಉದಾತ್ತವಾದುದನ್ನು ಗಳಿಸಲು ಹೋರಾಡಿರಿ. ಹಿಂತಿರುಗಿ ನೋಡದಿರಿ, ಇಲ್ಲ, ನಿಮ್ಮ ಅತ್ಯಂತ ಹತ್ತಿರದ ಬಂಧುಗಳ ಕರೆಗೂ ಹಿಂತಿರುಗದಿರಿ, ನಡೆಯಿರಿ ಮುಂದೆ ಮುಂದೆ! ... ಭಾರತಕ್ಕೆ ಇಂದು ಬೇಕಾಗಿರುವುದು ತನ್ನ ಒಂದು ಸಹಸ್ರ ಯುವಸಂತಾನದ ಬಲಿದಾನ ! ಆದರೆ ನೆನಪಿರಲಿ, ಮನುಷ್ಯರು ಬೇಕು, ಮನುಷ್ಯರು! ಕುರಿಗಳಲ್ಲ !...."

ಒಂದು ಶತಮಾನಕ್ಕೂ ಹಿಂದೆ, ೧೮೯೩ರಲ್ಲಿ ಅವರು ನೀಡಿದ ಕರೆ ಇದು. ಆ ಯುಗಪುರುಷನ ದೇಶಸೇವೆಯ ಕರೆಗೆ ಇಂದಿಗೂ ನಮ್ಮ ಜನಾಂಗ ಒಕ್ಕೊರಲಿನಿಂದ ಓಗೊಟ್ಟಂತೆ ಕಾಣುತ್ತಿಲ್ಲವಲ್ಲ! ಈವರೆಗೆ ನಮ್ಮಲ್ಲಿ ಎಷ್ಟೆಷ್ಟೋ ಪಂಡಿತ ಶಿರೋಮಣಿಗಳು, ತಂತ್ರಜ್ಞರು, ವೈದ್ಯರು, ಮುತ್ಸದ್ದಿಗಳು, ಕಲಾವಿದರು, ಇತರ ಪ್ರತಿಭಾನ್ವಿತರು ಆಗಿಹೋಗಿದ್ದಾರೆ, ಇಲ್ಲವೆಂದಲ್ಲ. ಆದರೆ ಅವರಲ್ಲಿ ಭಾರತಕ್ಕಾಗಿ ಜೀವನವನ್ನು ಮುಡುಪಾಗಿಟ್ಟವರು ಎಲ್ಲೋ ಒಬ್ಬಿಬ್ಬರು ಮಾತ್ರ.

ವಿದ್ಯಾರ್ಥಿ ದೆಸೆಯಲ್ಲೇ ದೇಶಪ್ರೇಮದ ಜೀವಸತ್ವ ರಕ್ತಗತವಾಗದಿದ್ದರೆ, ಮುಂದೆ ಅದನ್ನು ಮೈಗೂಡಿಸಿಕೊಳ್ಳುವುದು ದುಸ್ಸಾಧ್ಯ. ಈ ಕುರಿತಾಗಿ ಹಿರಿಯರು ಬೇಗನೆ ಎಚ್ಚೆತ್ತುಕೊಳ್ಳದಿದ್ದರೆ, ತನ್ನ ನಲ್ಮೆಯ ಹಾಲನ್ನುಂಡು, ಸುಪುಷ್ಟವಾಗಿ ಬೆಳೆದು, ಕಡೆಗೆ ಸ್ವಂತ ಸುಖಭೋಗಕ್ಕಾಗಿ ತಾಯಿಯನ್ನೇ ತೊರೆದುಹೋಗುವ ಹೊಣೆಗೇಡಿ ಮಕ್ಕಳನ್ನು ಹಡೆದ ತಾಯಿಯಂತಾದೀತು ಭಾರತಾಂಬೆಯ ಸ್ಥಿತಿ.

ಆದ್ದರಿಂದ, ಸ್ವಾತಂತ್ರ್ಯವೀರರ ರೋಮಾಂಚಕ ಚರಿತ್ರೆಯನ್ನು ಬಣ್ಣಿಸುವುದು, ದೇಶಸೇವೆಗಾಗಿ ಜೀವ ಸವೆಸಿದ ಹುತಾತ್ಮರ ಪುಣ್ಯಸ್ಮೃತಿಯ ಚಿತ್ರಣ, ಸ್ವಾಮಿ ವಿವೇಕಾನಂದರ ವೀರವಾಣಿಯ ಮನನ ಮುಂತಾದ ಉಪಾಯಗಳ ಮೂಲಕ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ – ರಾಷ್ಟ್ರಪ್ರೇಮಗಳ ಕಿಡಿ ಹೊತ್ತಿಸುವ ಹೊಣೆಗೂ ಶಿಕ್ಷಕರೇ ಹುಮ್ಮಸ್ಸಿನಿಂದ ಹೆಗಲೊಡ್ಡಬೇಕು.

ಈ ದೇಶಪ್ರೇಮ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಅರಳಿಸಲು ಅಸಮರ್ಥರಾದರೆ ಉಳಿದ ಎಲ್ಲಾ ವಿದ್ಯಾಭ್ಯಾಸವೂ ನಿಷ್ಪ್ರಯೋಜಕವೇ ಸರಿ. ರಾಷ್ಟ್ರದ ಹಿರಿಮೆ–ಗರಿಮೆಗಳು ಪ್ರಜೆಗಳ ಗುಣಮಟ್ಟವನ್ನು ಅವಲಂಬಿಸಿವೆ; ಭಾವಿ ಪ್ರಜೆಗಳ ಗುಣಮಟ್ಟವು ಬಹುಮಟ್ಟಿಗೆ ಶಿಕ್ಷಕರ ಕೈಯಲ್ಲಿದೆ; ಇದೊಂದು ಬಾದರಾಯಣ ಸಂಬಂಧ ಎನಿಸಿದರೂ ಇದು ಸತ್ಯಸ್ಯಸತ್ಯ ಎಂಬುದರಲ್ಲಿ ಎರಡು ಮಾತಿಲ್ಲ !

## ಸ್ಫೂರ್ತಿಪ್ರಭ

### ತಲೆ ಬಾಗಿ ನೀಡುವುದು ಏಕೆ?

ರಹಿಮಾನ್ ಒಬ್ಬ ಭಕ್ತಕವಿ. ಹಿಂದಿಯಲ್ಲಿ ಭಕ್ತಿಕವನಗಳನ್ನು ರಚಿಸಿದ್ದಾರೆ. ಅವರು ಬಹುದೊಡ್ಡ ಶ್ರೀಮಂತರು. ತಮ್ಮ ಸ್ವಂತ ಭೋಗಕ್ಕಾಗಿ ಆ ಸಂಪತ್ತನ್ನು ಅವರು ಉಪಯೋಗಿಸಲಿಲ್ಲ. ಬಡವರು ಮತ್ತು ಅರ್ಹರಿಗೆ ಅದನ್ನು ವಿತರಿಸುತ್ತಿದ್ದರು; ಸಾಧುಗಳಿಗೆ ಮತ್ತು ಮುಸ್ಲಿಂ ಫಕೀರರಿಗೆ ದಾನ ನೀಡುತ್ತಿದ್ದರು. ಆದರೆ ದಾನ ಮಾಡುವ ಸಮಯದಲ್ಲಿ ಎಂದೂ ಕಣ್ಣಿಗೆ ಕಣ್ಣಿಟ್ಟು ದಾನಪಾತ್ರರನ್ನು ನೋಡುತ್ತಿರಲಿಲ್ಲ. ಯಾವಾಗಲೂ ತಲೆಬಗ್ಗಿಸಿಕೊಂಡೇ ದಾನ ಮಾಡುತ್ತಿದ್ದರು. "ಇದೇಕೆ ಹೀಗೆ?" ಎಂದು ಅವರೊಡನೆ ಕೆಲವು ದಿನಗಳ ಕಾಲ ವಾಸಿಸಲು ಬಂದ ಸ್ನೇಹಿತನೊಬ್ಬ ಕೇಳಿದ. ಅದಕ್ಕೆ ರಹಿಮಾನ್ ಹೀಗೆ ಉತ್ತರಿಸಿದರು: " ಏಕೆಂದರೆ, ಹಾಗೆ ಮಾಡಿದರೆ ಜನರು ನನ್ನನ್ನು ಹೊಗಳುವರು. ಈ ಸಂಪತ್ತು ನನ್ನದಲ್ಲ, ಭಗವಂತನದು. ನಾನು ಭಗವಂತನ ಪ್ರತಿನಿಧಿ ಮಾತ್ರ. ಹೀಗಾಗಿ ನಾನು ತಲೆಬಗ್ಗಿ ನೀಡುವೆ. ಜನರ ಮೇಲೆ ದೃಷ್ಟಿಯಿಟ್ಟರೆ ನನಗೆ ಕಸಿವಿಸಿಯಾಗುವುದು." "ಹೌದೇನು?" ಎಂದ ಆ ಸ್ನೇಹಿತ. ಅವನ ಬಾಯಿಯಿಂದ ಬೇರೇನೂ ಮಾತು ಹೊರಡಲಿಲ್ಲ. ಮೆಚ್ಚುಗೆಯಿಂದ ತನ್ನ ಸ್ನೇಹಿತನನ್ನೇ ನೋಡುತ್ತ ನಿಂತ.

**ಮಹಾವ್ಯಕ್ತಿಯ ಪ್ರಥಮ ಪರೀಕ್ಷೆಯೇ ಅವನಲ್ಲಿನ ವಿನಯವಂತಿಕೆ.**
**– ಜಾನ್ ರಸ್ಕಿನ್**

**ಮಹಾವ್ಯಕ್ತಿಗೂ, ಮಾವಿನ ಮರಕ್ಕೂ ಇರುವ ಸಮಾನತೆಯೇನು? ಅವೆರಡೂ ತಮ್ಮ ಸಾಧನೆಯ ಭಾರದಿಂದ ಬಗ್ಗುತ್ತವೆ.**
**– ಅನಾಮಿಕ**

### ನಾನೊಬ್ಬ ಕಲ್ಲುಹರಳುಗಳನ್ನು ಆರಿಸುತ್ತಿರುವ ಮಗು

ಐಸಾಕ್ ನ್ಯೂಟನ್ ಎಲ್ಲ ಕಾಲಕ್ಕೂ ಜಗತ್ತು ಕಂಡ ಅತ್ಯಂತ ಶ್ರೇಷ್ಠ ವಿಜ್ಞಾನಿ. ಅವನು ಗುರುತ್ವಾಕರ್ಷಣ ಶಕ್ತಿಯನ್ನು ಕಂಡುಹಿಡಿದನು. ಗಣಿತಶಾಸ್ತ್ರದಲ್ಲಿಯೂ ಅಗಾಧವಾದ ಸಂಶೋಧನೆಯನ್ನು ಮಾಡಿದನು. ಹೀಗೆ ಅವನ ಸಾಧನೆಗಳು ಹಲವಾರು. ಕೃತಜ್ಞತೆಯಿಂದ ಕೂಡಿದ ಜಗತ್ತಿನ ಜನರು ಅವನ ಗೋರಿಯ ಮೇಲೆ ಇರುವ ಫಲಕದಲ್ಲಿ ಹೀಗೆ ಕೆತ್ತಿಸಿದರು:

**ಪ್ರಕೃತಿಮಾತೆಯ ನಿಯಮವೆಲ್ಲವು ಕತ್ತಲಲಿ ಉಳಿದಿತ್ತು**
**ದೇವರೆಂದನು, "ನ್ಯೂಟನ್ ಹುಟ್ಟಲಿ", ಎಲ್ಲೆಲ್ಲೂ ಬೆಳಕಾಯ್ತು**

ಅಂತಹ ಮಹಾಮೇಧಾವಿ ತನ್ನ ಬಗ್ಗೆ ಮತ್ತು ತನ್ನ ಸಾಧನೆಗಳ ಬಗ್ಗೆ ಹೇಳಿಕೊಂಡದ್ದು ಇಷ್ಟು: **"ಸತ್ಯದ ಸಾಗರ ತೀರದಲ್ಲಿ ಕಲ್ಲುಹರಳುಗಳನ್ನು ಆರಿಸುತ್ತಿರುವ ಚಿಕ್ಕ ಮಗು ನಾನು."**